**<u>ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ನ್ಯಾಯಾಲಯ.</u>**

**<u>ಹಿರೇಕೆರೂರು.</u>**

**<u>ಸಿ.ಸಿ.ನಂಬರ್ಃ 297/2018</u>**

ಸಿಡಬ್ಲ್ಯೂಃ 6

ಪಿಡಬ್ಲ್ಯೂಃ 3

| | | |
|---|---|---|
| ಸಾಕ್ಷಿಯ ಹೆಸರು | : | ಶೈಲಾ ಅನ್ವೇರಿ |
| ಗಂಡನ ಹೆಸರು | : | ಭರಮಗೌಡ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ಮನೆಗೆಲಸ |
| ವಾಸಸ್ಥಳ | : | ದೊಡ್ಡಗುಬ್ಬಿ |

ಇಂದು ದಿನಾಂಕಃ 16.01.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ</u>** ಮಾನ್ಯ ಎಪಿಪಿಯವರಿಂದಃ

ಚಾಸಾ-1 ಮತ್ತು 7 ನನಗೆ ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಗೊತ್ತಿಲ್ಲ. ನಾನು ಆಟೋ ಹತ್ತಿದ್ದು ಮಾತ್ರ ಗೊತ್ತು, ಮುಂದೆ ಏನಾಯಿತು ಎಂದು ನನಗೆ ಗೊತ್ತಿಲ್ಲ. ಮೃತ ಹನುಮಂತಪ್ಪ ಯಲ್ಲಪ್ಪ ಬಳ್ಳಾರಿ ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ. ಪ್ರಕರಣದಲ್ಲಿ ದೂರನ್ನು ಯಾರು ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿಯು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**<u>ಪಾಟೀ ಸವಾಲುಃ</u>** ಮಾನ್ಯ ಎಪಿಪಿಯವರಿಂದಃ

1. ದಿನಾಂಕಃ 20.02.2018 ರಂದು ಧರ್ಮಸ್ಥಳ ಸಂಘದ ಕೆಲಸವನ್ನು ಮುಗಿಸಿಕೊಂಡು ಸಂಜೆ 7-15 ರ ಸುಮಾರಿಗೆ ನಮ್ಮೂರಿಗೆ ಹೋಗುವ ರಟ್ಟೀಹಳ್ಳಿಯ ಚಿಕ್ಕಯಡಚಿ ಕ್ರಾಸ್‌ನಲ್ಲಿ ನಿಂತಿರುತ್ತೇವೆ. ಆಗ ನಮ್ಮೂರಿನ ಚಾಸಾ-7 ರವರ ಅಪ್ಪೇ ಆಟೋ ಅಲ್ಲಿಗೆ ಬಂದು ನಿಂತಿತು ಎಂದರೆ ಸರಿ. ಸದರಿ ಆಟೋದಲ್ಲಿ ನಾನು, ಚಾಸಾ-1 ಹಾಗೂ ಮೃತ ಹನುಮಂತಪ್ಪ ಯಲ್ಲಪ್ಪ ಬಳ್ಳಾರಿ ಹತ್ತಿ ಕುಳಿತುಕೊಂಡೆವು ಎಂದರೆ ಸರಿ.

2. ನಂತರ ಸದರಿ ಆಟೋ ಚಾಲಕ ತನ್ನ ಆಟೋವನ್ನು ರಾಣೆಬೆನ್ನೂರು ರಸ್ತೆಯ ಮಾರ್ಗವಾಗಿ ದೊಡ್ಡಗುಬ್ಬಿ ಕಡೆಗೆ ಸಂಜೆ 7-30 ಗಂಟೆಗೆ ನಿಧಾನವಾಗಿ ಹುಗ್ಗಿಯವರ ಹೊಲದ ಹತ್ತಿರ ಚಲಾಯಿಸಿಕೊಂಡು ಹೋಗುತ್ತಿದ್ದಾಗ, ಎದುರಿಗೆ ರಾಣೆಬೆನ್ನೂರಿನಿಂದ ರಟ್ಟೀಹಳ್ಳಿ ಕಡೆಗೆ ಹೋಗುತ್ತಿದ್ದ ಒಬ್ಬ ಕಾರಿನ ಚಾಲಕ ನಿರ್ಲಕ್ಷ್ಯತನದಿಂದ ಅತೀ ಜೋರಾಗಿ ತನ್ನ ಕಾರನ್ನು ಚಲಾಯಿಸಿ, ಡಿಕ್ಕಿ ಹೊಡೆದಿದ್ದರಿಂದ ಸದರಿ ಆಟೋ ಪಲ್ಟಿ ಆಯಿತು ಎಂದರೆ ನನಗೆ ಗೊತ್ತಿಲ್ಲ. ಸದರಿ ಅಪಘಾತದಿಂದ ನನಗೆ ಮುಂದೆಲೆಗೆ, ನೆತ್ತಿಗೆ ಮತ್ತು ಎಡಸೊಂಟಕ್ಕೆ ಗಾಯವಾಗಿತ್ತು ಎಂದರೆ ಸರಿ.

3. ಅದೇ ರೀತಿ ಮೃತ ಹನುಮಂತಪ್ಪ ಯಲ್ಲಪ್ಪ ಬಳ್ಳಾರಿರವರಿಗೆ ಬಲಗಾಲ ಮೊಣಕಾಲಿಗೆ, ಎಡಗಾಲಿನ ತೊಡೆಗೆ, ಮೊಣಕಾಲಿಗೆ, ಎಡಗೈಗೆ ಬಾರಿ ಮತ್ತು ಸಾಧಾ ಗಾಯಗಳಾಗಿದ್ದವು ಎಂದರೆ ಇರಬಹುದು, ನನಗೆ ಗೊತ್ತಿಲ್ಲ. ಅದೇ ರೀತಿ ಚಾಸಾ-1 ರವರ ಮುಖಕ್ಕೆ, ಬಲಗೈ, ಬಲಮೆಲುಕಿಗೆ ಗಾಯ ಪೆಟ್ಟಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ನಾನು ಸುಧಾರಿಸಿಕೊಂಡು ಆಟೋ ನಂಬರ ನೋಡಿದಾಗ ಅದು ಕೆಎ-27/ಬಿ-2155 ಮತ್ತು ಕಾರ ನಂಬರ ನೋಡಲಾಗಿ ಅದು ಕೆಎ-27/ಎಮ್-8558 ಇತ್ತು ಎಂದರೆ ನನಗೆ ಗೊತ್ತಿಲ್ಲ.

4. ಸದರಿ ಕಾರಿನಲ್ಲಿ ಒಬ್ಬ ಹೆಣ್ಣುಮಗಳಿದ್ದು, ಆಟೋ ಚಾಲಕನ ಹೆಸರನ್ನು ಕೇಳಲಾಗಿ ಸಂತೋಷ ಶಂಕರಪ್ಪ ಕೋಟಿಹಾಳ ಎಂದು ಹೇಳಿದ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಕಾರಿನಲ್ಲಿ ಕುತಿತಂತಹ ಹೆಣ್ಣು ಮಗಳ ಹೆಸರನ್ನು ಕೇಳಲಾಗಿ ಶರಾವತಿ ಶಂಕ್ರಪ್ಪ ಕೋಟಿಹಾಳ ಎಂದು ಹೇಳಿದಳು ಎಂದರೆ ಗೊತ್ತಿಲ್ಲ. ನಂತರ ನಮ್ಮೆಲ್ಲರನ್ನು ಆಂಬ್ಯುಲೆನ್ಸ್ ಮೂಲಕ ರಾಣೆಬೆನ್ನೂರಿನ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿದ್ದು, ಅಲ್ಲಿ ಪ್ರಥಮ ಚಿಕಿತ್ಸೆ ಪಡೆದು, ಹೆಚ್ಚಿನ ಚಿಕಿತ್ಸೆಗಾಗಿ ರಾಣೆಬೆನ್ನೂರಿನ ಓಂ ಆಸ್ಪತ್ರೆಗೆ ಕಳುಹಿಸಲಾಯಿತು ಎಂದರೆ ಗೊತ್ತಿಲ್ಲ. ಈ ಬಗ್ಗೆ ಚಾಸಾ-1 ರವರು ದೂರನ್ನು ನೀಡಿರುತ್ತಾರೆ ಎಂದರೆ ಗೊತ್ತಿಲ್ಲ.

5. ನಂತರ ದಿನಾಂಕಃ 21.02.2018 ರಂದು ಹನುಮಂತಪ್ಪ ಯಲ್ಲಪ್ಪ ಬಳ್ಳಾರಿಯವರು ಓಂ ಆಸ್ಪತ್ರೆಯಲ್ಲಿ ತೀರಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಈ ಬಗ್ಗೆ ಪೊಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ತಿರಸ್ಕರಿಸಿದ ಸದರಿ ಹೇಳಿಕೆಯನ್ನು ನಿಪಿ-14 ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿ ಪರ ಶ್ರೀ. ಎಸ್.ಹೆಚ್.ಪಿ. ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

Sd/-

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.